## ಮಾತು-ಕತೆ

◆ **'ಚೆಕ್ ಬುಕ್' ಕಥಾಸಂಕಲನಕ್ಕಾಗಿ 2019ರ ಸಾಲಿನ ಪ್ರತಿಷ್ಠಿತ 'ಸರಸ್ವತಿ ಸಮ್ಮಾನ್' ಪುರಸ್ಕಾರ ಪಡೆದಿರುವ ನಿಮಗೆ ಅಭಿನಂದನೆಗಳು. ಯಾವುದೇ ಸೃಜನಶೀಲ ವ್ಯಕ್ತಿತ್ವದ ರೂಪಣೆಯಲ್ಲಿ ಅವರ ಬಾಲ್ಯದ ಪರಿಸರದ ಪ್ರಭಾವವು ಮಹತ್ವದ ಪಾತ್ರ ವಹಿಸುತ್ತದೆ. ಹಾಗೆ ನಿಮ್ಮನ್ನು ರೂಪಿಸಿದ ಬಾಲ್ಯದ ವ್ಯಕ್ತಿಗಳು ಮತ್ತು ಘಟನೆಗಳ ಬಗ್ಗೆ ಹೇಳಿ ಸರ್...**

ಥ್ಯಾಂಕ್ಯು ಸಾಲಿ. ನನ್ನ ದೃಷ್ಟಿಯಲ್ಲಿ ಈ ಗೌರವ ಸಂದಿದ್ದು ನನಗಲ್ಲ, ಬದಲಿಗೆ ನನ್ನ ಭಾಷೆ ಮತ್ತು ನನ್ನ ಇಡೀ ಸಮುದಾಯಕ್ಕೆ. ಸರಳವಾಗಿ ಹೇಳೋದಾದರೆ ಇಲ್ಲಿ ನಾನೊಂದು ವಿನಮ್ರ ನಿಮಿತ್ತ ಮಾತ್ರ. ನಾನು ಅವಿಭಜಿತ ಭಾರತದ ಸಿಂಧ್ ಪ್ರಾಂತ್ಯದ ಮೀರ್‌ಪುರ್ ಖಾಸ್‌ನಲ್ಲಿ 1944ರ ಮಾರ್ಚ್ 2ರಂದು ಹುಟ್ಟಿದೆ. ವಿಭಜನೆಯ ನಂತರದ ಕೋಮುಗಲಭೆ ಮತ್ತು ಹಿಂಸಾಚಾರಗಳ ಕರಿನೆರಳಲ್ಲಿ ಉಂಟಾದ ಕ್ಲಿಷ್ಟಕರ ಸಂದರ್ಭದಲ್ಲಿ ನಮ್ಮ ಕುಟುಂಬ ಬರಿಗೈಯಲ್ಲಿ ಜೋಧ್‌ಪುರಕ್ಕೆ ವಲಸೆ ಬಂದಿತು. ಅಪ್ಪ ವೆನ್ನಿಮಲ್ ಮತ್ತು ನನ್ನ ನಾಲ್ಕು ಜನ ಚಿಕ್ಕಪ್ಪಂದಿರು ಸಣ್ಣ ಸಣ್ಣ ಅಂಗಡಿಗಳನ್ನು ತೆರೆದು ಅಲ್ಲಿ ನೆಲೆಯೂರಲು ಪ್ರಯತ್ನಪಡತೊಡಗಿದರು.

ನನ್ನ ಪ್ರಾಥಮಿಕ ಶಿಕ್ಷಣ ಜರುಗಿದ್ದು ತುಕಡಿ ತುಕಡಿಗಳಲ್ಲಿ. ಮೊದಲು ನನ್ನನ್ನು ಹಿಂದಿ ಮಾಧ್ಯಮದ ಪ್ರಾಥಮಿಕ ಶಾಲೆಗೆ ಕಳಿಸಲಾಯಿತು. ಅದು ಹಿಂದಿ ಭಾಷಿಕ ಪ್ರದೇಶವಾದ್ದರಿಂದ ಅಲ್ಲಿ ಸಿಂಧಿ ಮಾಧ್ಯಮದ ಪ್ರಶ್ನೆಯೇ ಇರಲಿಲ್ಲ. ನನಗೆ ಸಿಂಧಿ ಭಾಷೆ ಬಿಟ್ಟು ಬೇರಾವ ಭಾಷೆಯೂ ಗೊತ್ತಿರಲಿಲ್ಲವಾದ್ದರಿಂದ ಶಾಲೆಯಲ್ಲಿ ನನಗೇನೊಂದೂ ಅರ್ಥವಾಗುತ್ತಿರಲಿಲ್ಲ. ಹಾಗಾಗಿ ಅಲ್ಲಿ ಎಲ್ಲ ಶಿಕ್ಷಕರು ನನ್ನನ್ನು ಶಿಕ್ಷಿಸುವವರೇ ಆಗಿದ್ದರು. ಆ ಶಿಕ್ಷೆಯ ಮುಂದುವರೆದ ಭಾಗವಾಗಿ ಹಲವಾರು ಸಲ ಶಾಲೆ ಮುಗಿದರೂ ತರಗತಿ ಕೋಣೆಯಲ್ಲಿ ನನ್ನನ್ನು ಕೂಡಿ ಹಾಕಲಾಗುತ್ತಿತ್ತು ಕೂಡ. ಈ ಸಂವಹನದ ತೊಡಕಿನ ಪ್ರಶ್ನೆ ನನ್ನನ್ನು ಹಿಂಡಿ ಹಾಕುತ್ತಿದ್ದುದರಿಂದ ನಾನು ಕಡೆಗೆ ಓದಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡುಬಿಟ್ಟೆ. ಇದೇ ಸಂದರ್ಭಕ್ಕೆ ಸಂಸಾರದ ಖರ್ಚು ಸರಿದೂಗಿಸಲು ಸಾಕಾಗುವಷ್ಟು ಉತ್ಪನ್ನ ಆ ಸಣ್ಣ ಗೂಡಂಗಡಿಗಳಿಂದ ಬರುತ್ತಿರಲಿಲ್ಲವಾದ್ದರಿಂದ ಅಪ್ಪ ಅಹಮದಾಬಾದಿಗೆ ಹೊರಡಲು ತೀರ್ಮಾನಿಸಿದರು.

ಅಪ್ಪನ ಜೊತೆ ಅಹಮದಾಬಾದಿಗೆ ನಾನೂ ಹೊರಟೆ. ಬಹುತೇಕ ವಲಸಿಗ ಸಿಂಧಿಗಳು ಬಟ್ಟೆ ಅಂಗಡಿಗಳನ್ನಿಟ್ಟುಕೊಂಡಿದ್ದ ರೇವಡಿ ಬಜಾರ್‌ನಲ್ಲಿ ಅವರು ಒಂದು ಸೈಕಲ್ ಅಂಗಡಿ ಮತ್ತು ಅತಿಥಿಗೃಹ (ಮುಸಾಫಿರ್‌ಖಾನಾ) ತೆಗೆದರು. ನಮಗೆ ಪ್ರತ್ಯೇಕ ಮನೆ ಅಂತ ಇರಲಿಲ್ಲವಾದ್ದರಿಂದ ನಾನು ಮತ್ತು ಅಪ್ಪ ಅದರಲ್ಲೇ ಮಲಗುತ್ತಿದ್ದೆವು. ರೈಲ್ವೆ ಸ್ಟೇಷನ್ ಹತ್ತಿರವಿದ್ದುದರಿಂದ ಅತಿಥಿಗೃಹ ಚೆನ್ನಾಗಿ ನಡೆಯುತ್ತಿತ್ತು. ನನ್ನನ್ನು ಅಲ್ಲಿಯೇ ಇದ್ದ ಗುಜರಾತಿ ಮಾಧ್ಯಮದ ಶಾಲೆಗೆ ಸೇರಿಸಲಾಯಿತು. ನನ್ನ ಭಾಷಾ ಸಮಸ್ಯೆ ಅಲ್ಲೂ ಮುಂದುವರಿಯಿತು. ನಾನು ಅಷ್ಟು ಹೊತ್ತಿಗೆ ಒಂದಷ್ಟು ಹರುಕು ಮುರುಕು ಹಿಂದಿ ಕಲಿತುಕೊಂಡಿದ್ದೆ. ಆದರೆ ಗುಜರಾತಿ ಭಾಷೆ ಏನೇನೂ ಗೊತ್ತಿರಲಿಲ್ಲ. ಮತ್ತದೇ ಹಿಂಸೆ, ಶಿಕ್ಷಾ ಸರಣಿ... ಅಲ್ಲೂ ನನಗೆ ವಿದ್ಯೆ ತಲೆಗೆ ಹತ್ತಲಿಲ್ಲ.

ಅದೇ ಸಮಯಕ್ಕೆ ಅಪ್ಪ ಜೋಧಪುರದಲ್ಲಿದ್ದ ಚಿಕ್ಕಪ್ಪಂದಿರನ್ನೂ ಅಹಮದಾಬಾದಿಗೆ ಕರೆಸಿಕೊಂಡರು. ಅವರೆಲ್ಲ ಸೇರಿ ಬಹುಪಾಲು ಸಿಂಧಿ ಜನರೇ ಇದ್ದಂಥ ಕುಬೇರನಗರದಲ್ಲಿ ನಾಲ್ಕು ಚಿಕ್ಕ ಚಿಕ್ಕ ಮನೆಗಳನ್ನು ಬಾಡಿಗೆಗೆ ಹಿಡಿದರು. ಅಲ್ಲಿ ಸಿಂಧಿ ಮಾಧ್ಯಮದ್ದೇ ಶಾಲೆಯಿದ್ದು ನನ್ನನ್ನು ಅಲ್ಲಿಗೆ ಸೇರಿಸಲಾಯಿತು. ನನ್ನ ನಿಜವಾದ ಶಿಕ್ಷಣ ಅಲ್ಲಿಂದ ಆರಂಭವಾಯಿತೆನ್ನಬಹುದು. ನಾನು ಶಾಲೆಯಲ್ಲಿ ಅತ್ಯಂತ ಜಾಣ ವಿದ್ಯಾರ್ಥಿ ಅನ್ನಿಸಿಕೊಂಡೆ. ಮುಂದೆ ನನ್ನ ಶಿಕ್ಷಣ ಮುಗಿಯುವವರೆಗೂ ತರಗತಿಯಲ್ಲಿ ಮೊದಲ ಸ್ಥಾನವನ್ನು ಬೇರಾರಿಗೂ ಬಿಟ್ಟುಕೊಡಲಿಲ್ಲ. ಆಗ ಅಲ್ಲೊಬ್ಬ ಮುದುಕ ಒಂದು ಸಣ್ಣ ಲೈಬ್ರರಿ ನಡೆಸುತ್ತಿದ್ದ. ಅಲ್ಲಿಂದ ಸಿಂಧಿ ಪುಸ್ತಕಗಳನ್ನು ತಂದು ಓದುವ ಅಭ್ಯಾಸ ಬೆಳೆಯಿತು. ಆಗ